**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>**
**<u>ಬೆಂಗಳೂರು</u>**

**ಸಿಸಿ ನಂ. 17014/2016 ಪ್ರಾಸಾಃ 1**

**<u>ಸಾಕ್ಷಿಯನ್ನು ದಿಃ 21.12.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ.ಎಂ. ವಕೀಲರಿಂದಃ</u>**

ಇನ್ನೋವಾ ಕಾರು ಸಂ.ಕೆಎ-01-ಎಸಿ-9306. ಸದರಿ ಕಾರಿನ ಲೋನ್ ಮಂಜುನಾಥ್ ರವರ ಹೆಸರಿನಲ್ಲಿತ್ತು. ನಾನು ಸದರಿ ಕಾರನ್ನು ಖರೀದಿ ಮಾಡುವಾಗ ಕಾರಿನ ಬಾನೇಟ್ ಬಳಿ ಸ್ವಲ್ಪ ಸ್ಕ್ರಾಚ್ ಆಗಿತ್ತು. ನಾನು ಕಾರಿನ ಮಾಲೀಕ ಮಂಜುನಾಥ್ ರವರನ್ನು ಕಾರನ್ನು ಖರೀದಿಸುವಾಗ ಭೇಟಿ ಮಾಡಿರಲಿಲ್ಲ. ಆರೋಪಿಯು ಮಂಜುನಾಥ್ ರವರು ನನ್ನ ಸಂಬಂಧಿ ಎಂದು ತಿಳಿಸಿ ಸದರಿ ಕಾರನ್ನು ನನಗೆ ಮಾರಾಟ ಮಾಡಿರುತ್ತಾರೆ. ನನಗೆ ಕಾರು, ಆರ್.ಸಿ ಪುಸ್ತಕ, ವಿಮಾ ಪಾಲಿಸಿ, ಪರ್ಮಿಟ್ ಪ್ರತಿಗಳನ್ನು ಆರೋಪಿ ಹಸ್ತಾಂತರ ಮಾಡಿರುತ್ತಾರೆ. ಸದರಿ ದಾಖಲಾತಿಗಳನ್ನು ಮತ್ತು ಕಾರನ್ನು ಪಡೆದುಕೊಂಡಾಗ ನಾನು ಆರೋಪಿಗೆ 2 ಲಕ್ಷ ರೂಗಳನ್ನು ಚೆಕ್ ಮುಖಾಂತರ ಕೊಟ್ಟಿರುತ್ತೇನೆ. ಮೂಲ ದಾಖಲಾತಿಗಳನ್ನು ಲೋನ್ ಮುಗಿದ ನಂತರ ಕೊಡುವುದಾಗಿ ತಿಳಿಸಿದರು.

ಒಂದು ತಿಂಗಳ ನಂತರ ಪುನಃ ಒಂದು ಲಕ್ಷ ರೂಗಳನ್ನು ಚೆಕ್ ಮುಖಾಂತರ ಆರೋಪಿಗೆ ಕೊಟ್ಟಿರುತ್ತೇನೆ. ಸೆಪ್ಟಂಬರ್-2014 ರಲ್ಲಿ ಸದರಿ ಚೆಕ್ ಅನ್ನು ಕೊಟ್ಟಿದ್ದೆನು. ನಾನು ದಾಖಲಾತಿಗಳನ್ನು ಪರಿಶೀಲಿಸಿ ಕಾರನ್ನು ಖರೀದಿಸಿರುತ್ತೇನೆ. ಫೈನಾನ್ಸ್ ಕಂಪನಿಯವರು ಸದರಿ ಕಾರನ್ನು ಜಪ್ತಿ ಮಾಡಿದ ಕಾರಣ ನಾನು ಈ ಪ್ರಕರಣದ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ದೂರು ಸಲ್ಲಿಸುವ ಪೂರ್ವದಲ್ಲಿ ಅಮೃತಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಅಲ್ಲಿಯೂ ಸಹ ದೂರು ಸಲ್ಲಿಸಿದೆನು. ಪೊಲೀಸರು ಎನ್.ಸಿ.ಆರ್. ಮಾಡಿರುತ್ತಾರೆ, ಅದರ ಪ್ರತಿಯನ್ನು ಕೊಟ್ಟಿಲ್ಲ. ಪೊಲೀಸ್ ಠಾಣೆಗೆ ಯಾವ ದಿನಾಂಕ ಹೋಗಿದ್ದೆನು ಎಂದು ನೆನಪಿಲ್ಲ.

ನಾನು ಎ.ಸಿ.ಪಿ ಮತ್ತು ಡಿ.ಸಿ.ಪಿ. ರವರಿಗೆ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ನೇರವಾಗಿ ನ್ಯಾಯಾಲಯಕ್ಕೆ ದೂರು ಸಲ್ಲಿಸಿರುತ್ತೇನೆ. ನನಗೆ

ಕಾರನ್ನು ಮಾರಾಟ ಮಾಡಿರುವವರು ರಮೇಶ್ ಎಂಬುವವರು ಎಂದರೆ ಸರಿಯಲ್ಲ. ನಾನು ಚೆಕ್ ಮತ್ತು ನಗದು ಹಣವನ್ನು ಕಾರಿನ ಮಾಲೀಕ ಮಂಜುನಾಥ್ ರವರಿಗೆ ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನಾನು 2 ಲಕ್ಷ ಮತ್ತು 1ಲಕ್ಷದ ಮೌಲ್ಯದ ಚೆಕ್ ಗಳನ್ನು ಮಂಜುನಾಥ್ ರವರಿಗೆ ಕೊಟ್ಟಿದ್ದೆನು ಎಂದರೆ ಸರಿಯಲ್ಲ. ಸದರಿ ಮಂಜುನಾಥ್ ರವರನ್ನು ಪೊಲೀಸ್ ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆರೋಪಿಯ ಮನೆ ಬೆಂಗಳೂರಿನ ತಿಂಡ್ಲು ಏರಿಯಾದಲ್ಲಿ ಬರುತ್ತದೆ. ಸದರಿ ಮನೆಯ ಲ್ಯಾಂಡ್ ಮಾರ್ಕ್ ಅನ್ನು ನನಗೆ ಹೇಳಲು ಆಗುವುದಿಲ್ಲ. ನಿಪಿ-9 ರ ಜೊತೆ ಇರುವ ದೂರನ್ನು ನಾನು ಪೊಲೀಸರಿಗೆ ಸಲ್ಲಿಸಿರುತ್ತೇನೆ. ಸದರಿ ದೂರಿನಲ್ಲಿರುವ ಅಂಶಗಳು ಸತ್ಯವಾಗಿರುತ್ತದೆ.

ಫೈನಾನ್ಸ್ ಕಂಪನಿಯಿಂದ ಎನ್.ಒ.ಸಿ. ಯನ್ನು ಪಡೆದುಕೊಂಡು ನೀಡುವುದಾಗಿ ಆರೋಪಿ ತಿಳಿಸಿರುತ್ತಾರೆ. ನಾನು ಫೈನಾನ್ಸ್ ಕಂಪನಿಯಲ್ಲಿ ಸುಮಾರು 11 ಲಕ್ಷ ಸಾಲ ಬಾಕಿ ಇದ್ದುದ್ದಾಗಿ ಪರಿಶೀಲನೆ ಮಾಡಿದಾಗ ಕಂಡುಬಂದಿರುತ್ತದೆ. ಜುಲೈ2016 ರಲ್ಲಿ ನಾನು ನ್ಯಾಯಾಲಯಕ್ಕೆ ದೂರು ಸಲ್ಲಿಸಿರುತ್ತೇನೆ. ನಿಪಿ-3 ರಿಂದ 8 ರ ದಾಖಲಾತಿಗಳನ್ನು ನಾನೇ ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಹಣವನ್ನು ಹಿಂಪಡೆಯಲು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಕಾರಿನ ಮಾಲೀಕ ಮಂಜುನಾಥ್ ರವರೊಂದಿಗೆ ಕಾರಿನ ಸಂಬಂಧ ವ್ಯಾಪಾರ ಮಾಡಿ ಸಹಿ ಮಾಡಿದ ಖಾಲಿ ಚೆಕ್ ಅನ್ನು ಆತನಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**